# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ ಸದಸ್ಯರು : ಶ್ರೀ ಎನ್. ರವಿಕುಮಾರ್**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1305**
**ಉತ್ತರಿಸಬೇಕಾದ ದಿನಾಂಕ : 21.12.2018**

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೂ.1.18 ಕೋಟಿ ನೀಡಿ ಬಮೂಲ್‌ಗೆ ಹೊಸ ಸಲಹೆಗಾರರನ್ನಾಗಿ ನೇಮಕಾತಿ ಮಾಡಿಕೊಳ್ಳಲು ಕಾರಣ ಏನು: ಅವರಿಂದ ಇದುವರೆಗೆ ಬಮೂಲ್ ಸಂಸ್ಥೆಗೆ ಆಗಿರುವ ಲಾಭವೆಷ್ಟು: ಇದುವರೆಗೆ ಸಲಹೆಗಾರರಿಗೆ ಎಷ್ಟು ಮೊತ್ತ ಪಾವತಿಸಲಾಗಿದೆ. | ಕನಕಪುರದಲ್ಲಿ 600 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಚೀಸ್ ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನಾ ಘಟಕದಲ್ಲಿ, ಚೀಸ್ ಮತ್ತು ಇತರೆ ಮೌಲ್ಯಾಧಾರಿತ ಹಾಲಿನ ಉತ್ಪನ್ನಗಳ ಉತ್ಪಾದನೆ ಹಾಗೂ ಮಾರುಕಟ್ಟೆ ಅಭಿವೃದ್ಧಿ ಕೆಲಸಗಳಿಗೆ ಸಲಹೆಗಾರರ ಸೇವೆ ಅನಿವಾರ್ಯ/ಅತ್ಯಗತ್ಯವಾದ್ದರಿಂದ ಹೊಸ ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ವರದಿಸಿರುತ್ತಾರೆ.<br><br>ಚೀಸ್ ಮತ್ತು ಇತರೆ ಮೌಲ್ಯಾಧಾರಿತ ಹಾಲಿನ ಉತ್ಪನ್ನಗಳ ಉತ್ಪಾದನೆಗೆ ತಾಂತ್ರಿಕ ಮಾಹಿತಿ ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮಾರುಕಟ್ಟೆ ಅಭಿವೃದ್ಧಿಗೆ ಸೂಕ್ಷ್ಮ ಮಾಹಿತಿ/ಸಲಹೆಯನ್ನು ಸಲಹೆಗಾರರಿಂದ ಪಡೆದು ಕ್ರಮವಿಡಲಾಗುತ್ತಿದೆ. ಚೀಸ್ ಮತ್ತು ಇತರೆ ಗುಣಮಟ್ಟದ ಹಾಲಿನ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆ ವಿಸ್ತರಣೆ ಮಾಡಲು ಸಾಧ್ಯವಾಗುತ್ತದೆ. ದಿನಾಂಕ:24.09.2018 ರಿಂದ ಇವರ ಸೇವೆಯನ್ನು ಪಡೆಯಲಾಗಿದ್ದು, ರೂ.20,57,625/- (ಸೇವಾ ತೆರಿಗೆ ಒಳಗೊಂಡಿರುತ್ತದೆ) ಗಳನ್ನು ಪಾವತಿಸಲಾಗಿದೆ. ಇದರಲ್ಲಿ ಸೇವಾ ತೆರಿಗೆ ಮೊತ್ತ ರೂ.3,13,875/- ಗಳಿದ್ದು ಜಿ.ಎಸ್.ಟಿ. ಯಲ್ಲಿ ಇನ್‌ಪುಟ್ ಕ್ರೆಡಿಟ್ ಸೌಲಭ್ಯವಿದ್ದು ಒಕ್ಕೂಟಕ್ಕೆ ಸೇವಾ ತೆರಿಗೆ ಮೊತ್ತ ಹೊರೆಯಾಗುವುದಿಲ್ಲವೆಂದು ವ್ಯವಸ್ಥಾಪಕ ನಿರ್ದೇಶಕರು ವರದಿಸಿರುತ್ತಾರೆ. |
| ಆ | ಸದರಿಯವರ ಅರ್ಹತೆ ಮತ್ತು ವಿದ್ಯಾಭ್ಯಾಸದ ಕುರಿತು ಮಾಹಿತಿ ನೀಡುವುದು: ಬಮೂಲ್ ಸಂಸ್ಥೆಗೆ ಸಲಹೆಗಾರರನ್ನು ನೇಮಕ ಮಾಡುವಾಗ ಜಾಹೀರಾತು ನೀಡಲಾಗಿದೆಯೇ: ಸಲಹೆಗಾರರ ಹುದ್ದೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು: 1.18 ಕೋಟಿ ರೂಗಳನ್ನು ನೀಡುವ ಸಂದರ್ಭದಲ್ಲಿ ಅರ್ಹ ಮತ್ತು ಉತ್ತಮ ಸಲಹೆಗಾರರ ಆಯ್ಕೆಗೆ ಅವಕಾಶ ನೀಡದಿರಲು ಕಾರಣಗಳೇನು: | **ಸಲಹೆಗಾರರ ವಿದ್ಯಾರ್ಹತೆ, ಇತರೆ ವಿವರಗಳು.**<br>**ವಿದ್ಯಾರ್ಹತೆ:** ಎಂ.ಎಸ್ಸಿ., ಪಿ.ಹೆಚ್‌ಡಿ., (ಫುಡ್ & ನ್ಯೂಟ್ರಿಷನ್)<br>**ಅನುಭವ:** ಗುಣ ಭರವಸೆ ವಿಭಾಗದ ಹಿರಿಯ ವ್ಯವಸ್ಥಾಪಕರಾಗಿ Heinz India ಸಂಸ್ಥೆಯಲ್ಲಿ 01 ವರ್ಷ 09 ತಿಂಗಳ ರಾಷ್ಟ್ರ ವ್ಯಾಪ್ತಿಯ ಅನುಭವ.<br><br>ಅಮೂಲ್ ಡೇರಿಯ ಆಹಾರ ಉದ್ಯಮದಲ್ಲಿ 23 ವರ್ಷಗಳ ಸುದೀರ್ಘ ಅನುಭವ.<br><br>1. ವ್ಯವಸ್ಥಾಪಕರಾಗಿ ಉತ್ಪನ್ನಗಳ ಉತ್ಪಾದನೆ, ಗುಣ ನಿಯಂತ್ರಣ, ಗುಣ ಭರವಸೆ ಮತ್ತು ಸಿಸ್ಟಮ್ ಅಭಿವೃದ್ಧಿ ಕೆಲಸಗಳಲ್ಲಿ 12 ವರ್ಷಗಳ ಅನುಭವ.<br>2. ಪ್ರಧಾನ ವ್ಯವಸ್ಥಾಪಕರಾಗಿ ಉತ್ಪಾದನೆ, ಗುಣ ಭರವಸೆ, ಶೇಖರಣೆ, ಉತ್ಪನ್ನಗಳ ಉತ್ಪಾದನೆ, ಯೋಜನೆಗಳ ಅನುಷ್ಠಾನ, ಮಾರುಕಟ್ಟೆ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ 07 ವರ್ಷಗಳ ಅನುಭವ.<br>3. ಅಮೂಲ್ ಡೇರಿ ವ್ಯವಸ್ಥಾಪಕ ನಿರ್ದೇಶಕರಾಗಿ 04 ವರ್ಷಗಳ ಸೇವಾ ಅವಧಿಯಲ್ಲಿ |

| | | |
|---|---|---|
| | | • ವಾರ್ಷಿಕ ವಹಿವಾಟು 3340 ಕೋಟಿ ರೂಪಾಯಿಗಳಿಂದ 6200 ಕೋಟಿ ರೂಪಾಯಿಗಳಿಗೆ ಹೆಚ್ಚಳ. ವಾರ್ಷಿಕ ಹಾಲು ಶೇಖರಣೆ 65 ಕೋಟಿ ಕೆ.ಜಿ ಯಿಂದ 110 ಕೋಟಿಗೆ ಹೆಚ್ಚಳ.<br>• ಚೀಸ್ ಉತ್ಪಾದನೆ, ಪನ್ನೀರ್, ವೇ-ಪೌಡರ್, ಚಾಕೋಲೇಟ್, ಪಶು ಆಹಾರ ಮುಂತಾದ ಆಟೋಮೇಟೆಡ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸಿ, ಚೀಸ್ ಮತ್ತು ಇತರೆ ಹಾಲಿನ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆ ಅಭಿವೃದ್ಧಿ ಅನುಭವ.<br>• ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಾಲಿನ ಉತ್ಪನ್ನಗಳ ಮಾರಾಟ ಅಭಿವೃದ್ಧಿ.<br><br>ಸಲಹೆಗಾರರ ನೇಮಕಕ್ಕೆ ದಿನಾಂಕ:02.02.2018 ರಂದು ಆಸಕ್ತಿಯ ಅಭಿವ್ಯಕ್ತಿಗೆ (E.O.I) TIMES OF INDIA, ALL INDIA EDITION ನಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ದಿನಾಂಕ:24.02.2018 ರಂದು shine.com job website ನಲ್ಲಿ ಪ್ರಕಟಿಸಲಾಗಿದೆ. ಪ್ರಕಟಣೆಯನ್ನಾಧರಿಸಿ ಉತ್ಪನ್ನ ಮತ್ತು ಮಾರುಕಟ್ಟೆ ಸಲಹೆಗಾರರ ಹುದ್ದೆಗೆ 06 ಅರ್ಜಿಗಳು ಸ್ವೀಕೃತವಾಗಿವೆ. ಪ್ರಕಟಣೆಯಲ್ಲಿ ತಿಳಿಸಿರುವ ವಿದ್ಯಾರ್ಹತೆ ಮತ್ತು ಅನುಭವಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ, ಡಾ: ರತ್ನಂ ರವರ ವಿದ್ಯಾರ್ಹತೆ ಮತ್ತು ಅನುಭವ ಸೂಕ್ತ ಮತ್ತು ಅರ್ಹವೆಂದು ಪರಿಗಣಿಸಿ ಉತ್ತಮ ಸಲಹೆಗಾರರೆಂದು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಒಕ್ಕೂಟದ ವ್ಯವಸ್ಥಾಪಕರು ದಿನಾಂಕ:25-02-2019 ರ ಪತ್ರದಲ್ಲಿ ವರದಿಸಿರುತ್ತಾರೆ. |
| ಇ | ಸದರಿಯವರು ಈ ಹಿಂದೆ ಗುಜರಾತ್ ಆನಂದ್‌ನಲ್ಲಿ ಹಾಲು ಉತ್ಪಾದಕ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾಗ ರೂ.450 ಕೋಟಿ ಮೊತ್ತದ ಅವ್ಯವಹಾರದ ಆರೋಪ ಪತ್ರಿಕೆಗಳಲ್ಲಿ ವರದಿ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಅವ್ಯವಹಾರದ ಆರೋಪ ಇರುವ ವ್ಯಕ್ತಿಯನ್ನೇ ಏಕೆ ಹಿಂಬಾಗಿಲ ಮೂಲಕ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ: | ಪತ್ರಿಕೆಯಲ್ಲಿ ಪ್ರಕಟಿಸಿರುವ ಅವ್ಯವಹಾರವನ್ನು (ಮೂರು ತಿಂಗಳು) ಕೂಲಂಕಶವಾಗಿ ಪರಿಶೀಲಿಸಿ, ಅವರ ಮೇಲಿರುವ ಆರೋಪ ಸಾಬೀತಾಗಿಲ್ಲದ ಕಾರಣ ಪಾರದರ್ಶಕವಾಗಿ ಸಲಹೆಗಾರರಾಗಿ ನೇಮಕ ಮಾಡಿಕೊಳ್ಳಲಾಗಿದೆ. ಒಕ್ಕೂಟದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳು ವಂತೆಯೇ ಸಲಹೆಗಾರರನ್ನು ನೇಮಿಸಿಕೊಂಡಿದ್ದು, ಸರ್ಕಾರದ ಆರ್ಥಿಕ ನೆರವು ಇಲ್ಲದ ಕಾರಣ ಸರ್ಕಾರದ ಅನುಮತಿ ಪಡೆದಿರುವುದಿಲ್ಲವೆಂದು ಒಕ್ಕೂಟದ ವ್ಯವಸ್ಥಾಪಕರು ವರದಿಸಿರುತ್ತಾರೆ.<br><br>ಕರ್ನಾಟಕ ಸಹಕಾರ ಸಂಘಗಳ ನಿಯಮ 17(4) ರಲ್ಲಿ ಸಹಕಾರ ಸಂಘದ ವ್ಯವಸ್ಥಾಪನಾ ಮಂಡಳಿಯು "ಹೊರಗುತ್ತಿಗೆ" ಆಧಾರದ ಮೇಲೆ ಸಹಕಾರ ಸಂಘದ ಸೇವಾ ಹಿತದೃಷ್ಟಿಯಿಂದ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿ ಮೀರದಂತೆ ರಿಜಿಸ್ಟ್ರಾರ್‌ರ ಅನುಮೋದನೆಯೊಂದಿಗೆ ದ್ವಿತೀಯ ದರ್ಜೆಯ ಸಹಾಯಕ ಅಥವಾ ಸರಿ ಸಮಾನತೆಯ ಮತ್ತು ಕೇಡರ್ ದರ್ಜೆಯ ಕೆಳಗಿನ ಹುದ್ದೆಗಳ ನೇಮಕ ಮಾಡಿಕೊಳ್ಳಬಹುದು ಎಂದಿರುತ್ತದೆ.<br><br>ಆದರೆ ಒಕ್ಕೂಟವು ಕರ್ನಾಟಕ ಸಹಕಾರ ಸಂಘಗಳ ನಿಯಮ 17(4) ರ ರೀತ್ಯಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ನಿಬಂಧಕರ ಅನುಮೋದನೆ ಪಡೆದಿರುವುದಿಲ್ಲ. |

| | | |
|---|---|---|
| ಈ | ಬಮೂಲ್ ವತಿಯಿಂದ ಕನಕಪುರ ತಾಲ್ಲೂಕಿನಲ್ಲಿ ಸುಮಾರು 600 ಕೋಟಿ ವೆಚ್ಚದಲ್ಲಿ ಡೇರಿ ಘಟಕ ಸ್ಥಾಪಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು ಈ ಅವಧಿಯಲ್ಲಿ ಬಮೂಲ್ ಸಲಹೆಗಾರರನ್ನಾಗಿ ರೂ.450 ಕೋಟಿ ಮೊತ್ತದ ಅವ್ಯವಹಾರದ ಆರೋಪ ಹೊತ್ತಿರುವ ವ್ಯಕ್ತಿಯನ್ನು ನೇಮಿಸುವುದು ಸರಿಯೇ: ಈ ನೇಮಕಾತಿಯು 600 ಕೋಟಿಯಲ್ಲಿ ಅವ್ಯವಹಾರ ನಡೆಯಲು ಮುಕ್ತಪರವಾನಿಗೆ ನೀಡಿದಂತಾಗಲಿಲ್ಲವೆ: ಈ ಕುರಿತು ಸರ್ಕಾರದ ನಿಲುವೇನು? | ಸಲಹೆಗಾರರ ಮೇಲೆ ಅವ್ಯವಹಾರದ ಆರೋಪ ಸಾಬೀತಾಗಿಲ್ಲವೆಂಬುದನ್ನು ದೃಢೀಕರಿಸಿಕೊಂಡು ನೇಮಕ ಮಾಡಿಕೊಳ್ಳಲಾಗಿದೆ. ಯೋಜನೆ ಪೂರ್ಣಗೊಂಡಿದ್ದು, ಚೀಸ್ ಮತ್ತು ಇತರೆ ಮೌಲ್ಯಾಧಾರಿತ ಹಾಲಿನ ಉತ್ಪನ್ನಗಳ ಉತ್ಪಾದನೆ ಹಾಗೂ ಮಾರುಕಟ್ಟೆ ವಿಸ್ತರಿಸುವ ಹಂತದಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ. ಚೀಸ್ ಮತ್ತು ಇತರೆ ಮೌಲ್ಯಾಧಾರಿತ ಹಾಲಿನ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆ ವಿಸ್ತರಣೆ ಅಭಿವೃದ್ಧಿಗೆ ಚೀಸ್ ಉತ್ಪಾದನೆಯಲ್ಲಿ ದೀರ್ಘ ಅನುಭವ ಮತ್ತು ಯಶಸ್ವಿ ತಂತ್ರಜ್ಞರಾದ ಡಾ:: ರತ್ನಂ ರವರ ಅರ್ಹತೆಯನ್ನು ಪರಿಗಣಿಸಿ ಪಾರದರ್ಶಕವಾಗಿ ನೇಮಕ ಮಾಡಲಾಗಿದೆ. ಚೀಸ್ ಮತ್ತು ಇತರೆ ಗುಣಮಟ್ಟದ ಹಾಲಿನ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆ ವಿಸ್ತರಣೆ/ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆ. |

ಸಿಒ 150 ಸಿಸಿಬಿ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು
ಬಂಡೆಪ್ಪ ಖಾಶೆಂಪೂರ
ಸಹಕಾರ ಸಚಿವರು